**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2026-27ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಕರ್ನಾಟಕ ರಾಜ್ಯದ ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ /ಕ್ಲಸ್ಟರ್ ವಾರು ವಿಮಾ ಸಂಸ್ಥೆಗಳನ್ನು ಮುಂದುವರೆಸಲು ಹಾಗೂ ಪ್ರೀಮಿಯಂ ದರಗಳನ್ನು ನಿಗದಿಪಡಿಸಿ ಯೋಜನಾ ಅನುಷ್ಠಾನ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:

1. ಕೇಂದ್ರ ಸರ್ಕಾರದ PMFBY ಅನುಷ್ಠಾನ ಮಾರ್ಗಸೂಚಿ – 2023
2. ದಿನಾಂಕ:06-02-2023 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯ ನಡವಳಿಗಳು , No: JDA(CI)/ SLCCCI/ 36/2022-23 ದಿನಾಂಕ: 10-02-2023
3. RWBCIS Premium and Implementation GO No ತೋಇ 676 ತೋಸವಿ 2022 ಬೆಂಗಳೂರು, ದಿನಾಂಕ: 04.07.2023, 06.07.2023, 19.07.2023, 19.08.2023/ 26.06.2024 ಮತ್ತು 23.06.2025.
4. RWBCIS Premium GO No (11 ಜಿಲ್ಲೆಗಳು): HORTI 334 HGM 2025 ಬೆಂಗಳೂರು, ದಿನಾಂಕ: 25.07.2025
5. RWBCIS Implementation GO No (11 ಜಿಲ್ಲೆಗಳು): HORTI 334 HGM 2025 ಬೆಂಗಳೂರು, ದಿನಾಂಕ: 29.07.2025
6. ದಿನಾಂಕ: 29.04.2026ರಂದು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ಬೆಳೆ ವಿಮೆ ಸಮನ್ವಯ ಸಮಿತಿ ಸಭೆಯ ನಡವಳಿಗಳು.
7. ಕೇಂದ್ರ ಸರ್ಕಾರದ ಪತ್ರಸಂಖ್ಯೆ: F.No. 18011t0212023-Cr.tt - Part (3) [FrS - 189883)], Government of India, Ministry of Agriculture & Farmers' Welfare Department of Agriculture & Farmers' Welfare, (Crop Insurance Division) Krishi Bhawan. New Delhi, Dated: May 26, 2026.
8. 2023 ರಿಂದ 2026 ನೇ ಸಾಲಿನ ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಹಾಗೂ KTPP Act & Rules.
9. ಪ್ರಸ್ತುತ ಅನುಷ್ಠಾನ ವಿಮಾ ಕಂಪನಿಗಳ ಸಹಮತಿ ಪತ್ರ
10. ಕಡತ ಸಂಖ್ಯೆ: DH-HEGT/95/2025/ 2006522 ರ ಕಂಡಿಕೆ ಸಂಖ್ಯೆ 36 ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರವರು ನೀಡಿರುವ ಅನುಮೋದನೆ.
11. ಸರ್ಕಾರದ ಆದೇಶ ಸಂಖ್ಯೆ: AGRI/122/AML/2026, ಬೆಂಗಳೂರು, ದಿನಾಂಕ:05.05.2026
12. ತೋಟಗಾರಿಕೆ ನಿರ್ದೇಶಕರ ಪ್ರಸ್ತಾವನೆ ಪತ್ರ ಸಂಖ್ಯೆ: DH-HEG0HEGT/95/2025/2006522, ದಿನಾಂಕ:09.06.2026.

********

ಪ್ರಸ್ತಾವನೆ:

ಕೇಂದ್ರ ವಲಯ ಯೋಜನೆಯಾದ ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ [Prachan Mantri Fasal Bima Yojana (PMFBY)] ಹಾಗೂ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ [Restructured Weather Based Crop Insurance Scheme (RWBCIS)] ಗಳನ್ನು 2016-17 ನೇ ಸಾಲಿನ ಮುಂಗಾರಿನಿಂದ ಮೇಲೆ ಓದಲಾದ (1)ರ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆಯನ್ನು ಕೃಷಿ ಇಲಾಖೆ ಮತ್ತು ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ತೋಟಗಾರಿಕೆ ಇಲಾಖೆ ಅನುಷ್ಠಾನಗೊಳಿಸಲಾಗುತ್ತಿವೆ.

1. ಈ ಯೋಜನೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೇಂದ್ರ ಸರ್ಕಾರ ಎಂಪ್ಯಾನಲ್ ಮಾಡಿರುವ ಬೆಳೆವಿಮಾ ಸಂಸ್ಥೆಗಳಿಂದ ಇ-ಟೆಂಡರ್ ಆಹ್ವಾನಿಸಿ ವಿಮಾ ಕಂತಿನ ದರದ ಅತಿ ಕಡಿಮೆ ಬಿಡ್ (L1) ಸಂಸ್ಥೆಯನ್ನು ಮೂರು ವರ್ಷದ ಅವಧಿಗೆ ಆಯ್ಕೆ ಮಾಡಲಾಗುತ್ತದೆ.

2. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಕೇಂದ್ರ ಸರ್ಕಾರವು ನೀರಾವರಿ ಜಿಲ್ಲೆಗಳಿಗೆ ಶೇ. 25 ಮತ್ತು ಮಳೆ ಆಶ್ರಿತ ಜಿಲ್ಲೆಗಳಿಗೆ ಶೇ. 30 ರಷ್ಟು ಪ್ರೀಮಿಯಂ ಮಿತಿ ನಿಗದಿಪಡಿಸಿದ್ದು, ಇದಕ್ಕಿಂತ ಅಧಿಕ ಪ್ರೀಮಿಯಂ ನಮೂದಿಸಿದ ಜಿಲ್ಲೆ-ಬೆಳೆ ಸಂಯೋಜನೆಗಳನ್ನು ಅಧಿಸೂಚನೆಯಿಂದ ಕೈಬಿಡಲು ಅಥವಾ ಪರ್ಯಾಯವಾಗಿ ಹೆಚ್ಚುವರಿ ಪ್ರೀಮಿಯಂ ಅನ್ನು ರಾಜ್ಯ ಸರ್ಕಾರವು ಸಂಪೂರ್ಣವಾಗಿ ಭರಿಸಬೇಕಾಗಿರುತ್ತದೆ.

3. ಮೇಲೆ ಓದಲಾದ (2)ರ ನಡವಳಿಯನ್ವಯ, ಕೇಂದ್ರ ಸರ್ಕಾರದ ಮಿತಿಯ ನಂತರ ರಾಜ್ಯ ಸರ್ಕಾರವು ಶೇಕಡ 10 ರವರೆಗೆ ಹೆಚ್ಚುವರಿ ಹೊರೆಯನ್ನು ಭರಿಸಲು ಮತ್ತು 10% ಕ್ಕಿಂತ ಹೆಚ್ಚಿನ ಮೊತ್ತವನ್ನು ರೈತರು ಭರಿಸಲು ತೀರ್ಮಾನಿಸಲಾಗಿರುತ್ತದೆ. ಒಂದು ವೇಳೆ ರಾಜ್ಯ ಸರ್ಕಾರದ ಹೆಚ್ಚುವರಿ ಶೇಕಡಾ 10 ಮೀರಿದ್ದಲ್ಲಿ ರೈತರು ಹೆಚ್ಚುವರಿ ಪ್ರೀಮಿಯಂ ಭರಿಸಬೇಕಾಗಿರುತ್ತದೆ.

4. ಅದರಂತೆ, ಮೇಲೆ ಓದಲಾದ (2 & 3) ನಡವಳಿ ಮತ್ತು ಆದೇಶಗಳನ್ವಯ 2023-24, 2024-25 ಮತ್ತು 2025-26 ನೇ ಸಾಲುಗಳಿಗೆ ಟೆಂಡರ್ ಮೂಲಕ ವಿಮಾ ಸಂಸ್ಥೆಗಳನ್ನು ಆಯ್ಕೆ ಮಾಡಿ, ಪ್ರೀಮಿಯಂ ದರವನ್ನು ನಿಗದಿಪಡಿಸಿ, ಹಸಿರುಮೆಣಸಿನಕಾಯಿ, ಹೂಕೋಸು, ಅಡಿಕೆ, ಕರಿಮೆಣಸು, ವಿಳ್ಯದೆಲೆ, ದ್ರಾಕ್ಷಿ, ದಾಳಿಂಬೆ, ನಿಂಬೆ, ಮಾವು, ಪರಂಗಿ ಮತ್ತು ಶುಂಠಿ ಬೆಳೆಗಳನ್ನು (ಒಟ್ಟಾರೆ-11 ಬೆಳೆಗಳು) ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಅಧಿಸೂಚಿಸಲಾಗಿರುತ್ತದೆ.

5. 2023-24, 2024-25 ಹಾಗೂ 2025-26ನೇ ಸಾಲುಗಳಿಗೆ ಹನ್ನೊಂದು (11) ಜಿಲ್ಲೆಗಳಲ್ಲಿ RWBCIS ಯೋಜನೆಯನ್ನು ಅನುಷ್ಠಾನಗೊಳಿಸಲು M/s. KSHEMA GIC ಸಂಸ್ಥೆಯನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಸದರಿ ಸಂಸ್ಥೆಯು ಕೆಲವು ಟೆಂಡರ್ ಷರತ್ತು/ ಮಾರ್ಗಸೂಚಿಗಳನ್ನು ಸಮರ್ಪಕವಾಗಿ ಪಾಲಿಸದಿರುವುದು ಹಾಗೂ ವಿಶೇಷವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿಮಾ ಪರಿಹಾರ ಪಾವತಿಯಲ್ಲಿ ವಿಳಂಬ ಮಾಡಿರುವುದು ಕಂಡು ಬಂದ ಹಿನ್ನೆಲೆಯಲ್ಲಿ, 2025-26ನೇ ಸಾಲಿಗೆ ಸದರಿ ಸಂಸ್ಥೆಯ ಟೆಂಡರ್ ಅನ್ನು ರದ್ದುಗೊಳಿಸಿ, KTPP ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಹನ್ನೊಂದು (11) ಪ್ರತ್ಯೇಕ ಜಿಲ್ಲೆ/ ಕ್ಲಸ್ಟರ್ ಗಳಿಗೆ ಹೊಸದಾಗಿ ಅಲ್ಪಾವಧಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿತ್ತು. ನಿಗದಿತ ಪ್ರಕ್ರಿಯೆಯಂತೆ ಆಯಾ ಜಿಲ್ಲೆ/ ಕ್ಲಸ್ಟರ್ ಗಳಿಗೆ ಅತೀ ಕಡಿಮೆ ಸರಾಸರಿ ಪ್ರೀಮಿಯಂ ದರ (Lowest Weighted Average Premium - L1) ನಮೂದಿಸಿದ ವಿಮಾ ಸಂಸ್ಥೆಗಳು ಹಾಗೂ ಬೆಳೆವಾರು ಪ್ರೀಮಿಯಂ ದರಗಳನ್ನು ಅನುಮೋದಿಸಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಮೇಲೆ ಓದಲಾದ (4&5) ರ ಆದೇಶಗಳಲ್ಲಿ ಹೊಸದಾಗಿ ಆಯ್ಕೆಯಾದ ವಿಮಾ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ.

6. ರಾಜ್ಯದಲ್ಲಿ ಈ ಹಿಂದೆ ಯೋಜನೆ ಅನುಷ್ಠಾನಕ್ಕಾಗಿ ಅಂತಿಮಗೊಳಿಸಲಾದ ಟೆಂಡರ್ ಅವಧಿಯು 2025–26ನೇ ಆರ್ಥಿಕ ವರ್ಷದೊಂದಿಗೆ ಮುಕ್ತಾಯಗೊಳ್ಳುವುದರಿಂದ, 2026–27ನೇ ಸಾಲಿನಿಂದ ಯೋಜನೆ ಅನುಷ್ಠಾನಕ್ಕಾಗಿ ಹೊಸದಾಗಿ ವಿಮಾ ಸಂಸ್ಥೆಗಳನ್ನು ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸುವ ಅಗತ್ಯವಿರುತ್ತದೆ. ಯೋಜನೆಯ ಮಾರ್ಗಸೂಚಿಯನ್ವಯ, ಯೋಜನೆಯ ಅನುಷ್ಠಾನಕ್ಕಾಗಿ ವಿಮಾ ಸಂಸ್ಥೆಗಳನ್ನು ಪ್ರತಿ ಮೂರು (3) ವರ್ಷಕ್ಕೊಮ್ಮೆ ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆಯ (ಭಾರತ ಸರ್ಕಾರದಿಂದ Empanelment ಪಡೆದ ವಿಮಾ ಸಂಸ್ಥೆಗಳಿಂದ ಮಾತ್ರ) ಮೂಲಕ ಆಯ್ಕೆ ಮಾಡಬೇಕಾಗಿರುತ್ತದೆ. ಆದರೆ, 2026-27ನೇ ಸಾಲಿಗೆ (ಕೇಂದ್ರ ಸರ್ಕಾರ ಮಾರ್ಗ ಸೂಚಿಗಳಲ್ಲಿ ಬದಲಾವಣೆ ತರುತ್ತಿರುವ ಹಿನ್ನೆಲೆಯಲ್ಲಿ ಮೂರು ವರ್ಷದ ಬದಲಾಗಿ ಒಂದು ವರ್ಷಕ್ಕೆ ಮಾತ್ರ) ಮಾತ್ರ ಟೆಂಡರ್ ಆಹ್ವಾನಿಸಲು ಓದಲಾದ (6) ರ ನಡವಳಿಯಲ್ಲಿ ಸಮಿತಿಯು ಅನುಮೋದನೆ ನೀಡಿರುತ್ತದೆ.

7. ಮುಂದುವರೆದು, ಓದಲಾದ (7) ರ ಭಾರತ ಸರ್ಕಾರದ ಪತ್ರದಲ್ಲಿ, 2025-26ನೇ ಸಾಲಿನ ಹಿಂಗಾರು ಹಂಗಾಮಿನೊಂದಿಗೆ ಪ್ರಸ್ತುತ ಟೆಂಡರ್ ಅವಧಿಯು ಮುಕ್ತಾಯಗೊಳ್ಳಲಿರುವುದರಿಂದ ಹಾಗೂ 2026ರ ಮುಂಗಾರು ಹಂಗಾಮಿನ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ, ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಈ ಮುಂದಿನಂತೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

"State/UTs are given flexibility to choose between

i. continuing implementation on the same premium rates and contractual arrangements as discovered during the 2023-2026 tender cycle or more recent, ensuring immediate continuity with minimal administrative disruption;

or

ii. issuing a fresh one-year tender for Kharif 2026 and Rabi 2026-27 as per existing terms and conditions in PMFBY Operational Guidelines, 2023, enabling fresh premium discovery and addressing insurer performance concerns, allowing thereby enhancement in farmer risk coverage through market-driven price discovery."

8. ಸದರಿ ಯೋಜನೆಯನ್ನು 2026-27ನೇ ಸಾಲಿಗೆ ಅನುಷ್ಠಾನಗೊಳಿಸಲು ರೈತರ ವಿಮಾ ನೋಂದಣಿ ಪ್ರಕ್ರಿಯೆಯನ್ನು ಜೂನ್ 30/ ಜುಲೈ 31ರೊಳಗೆ ಪೂರ್ಣಗೊಳಿಸಬೇಕಾಗಿರುವುದರಿಂದ ಹಾಗೂ ಹೊಸ ಟೆಂಡರ್ ಪ್ರಕ್ರಿಯೆಗೆ ಹೆಚ್ಚಿನ ಸಮಯಾವಕಾಶ ಬೇಕಾಗಿರುವುದರಿಂದ

a. ರೈತರ ಹಿತದೃಷ್ಟಿಯಿಂದ 2026-27ನೇ ಸಾಲಿಗೆ ರಾಜ್ಯದಲ್ಲಿ RWBCIS ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ 2025-26 ರ ವಿಮಾ ಸಂಸ್ಥೆಗಳನ್ನು 01 ವರ್ಷ (2026-27) ಮುಂದುವರಿಸುವುದು ಸೂಕ್ತವೆಂದು ಪರಿಗಣಿಸಲಾಗಿರುತ್ತದೆ.

b. ಅಲ್ಲದೆ, ಮೇಲೆ ಓದಲಾದ (8) ರಂತೆ ಈ ಹಿಂದಿನ ಟೆಂಡರ್‌ನ volume II, clause 2.2 ಪ್ರಕಾರ "...... The department/ client reserves the right to extend the contract with consent of the other party" ರಂದು ತಿಳಿಸಲಾಗಿರುತ್ತದೆ.

c. ಓದಲಾದ (9) ರಂತೆ ಪ್ರಸ್ತುತ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ವಿಮಾ ಕಂಪನಿಗಳು ಸಹ ಪ್ರಸ್ತುತ ಷರತ್ತುಗಳು ಮತ್ತು ನಿಬಂಧನೆಗಳಡಿ ಯೋಜನೆಯನ್ನು ಮುಂದುವರಿಸಲು ತಮ್ಮ ಒಪ್ಪಿಗೆ/ಸಹಮತಿಯನ್ನು ನೀಡಿರುತ್ತಾರೆ.

d. ಈ ಹಿನ್ನೆಲೆಯಲ್ಲಿ ಯೋಜನೆಯನ್ನು ಸಕಾಲದಲ್ಲಿ ಅನುಷ್ಠಾನ ಮಾಡುವ ಹಾಗೂ ರೈತರ ಹಿತದೃಷ್ಟಿಯಿಂದ 2026-27ನೇ ಸಾಲಿಗೆ ರಾಜ್ಯದಲ್ಲಿ RWBCIS ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ 2025-26 ರ ವಿಮಾ ಸಂಸ್ಥೆಗಳನ್ನು 01 ವರ್ಷ (2026-27) ಮುಂದುವರಿಸಲು ಓದಲಾದ (10) ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅನುಮೋದನೆ ಪಡೆಯಲಾಗಿದೆ.

9. ಅದರಂತೆ, ರೈತರ ನೋಂದಣಿ, ಪಾಲಿಸಿ ವಿತರಣೆ, ಜಾಗೃತಿ ಕಾರ್ಯಕ್ರಮಗಳು, ತಂತ್ರಾಂಶ ಏಕೀಕರಣ ಹಾಗೂ ಇತರೆ ಆಡಳಿತಾತ್ಮಕ ಸಿದ್ಧತೆಗಳಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ RWBCIS ಯೋಜನೆಯ ನಿರಂತರ ಅನುಷ್ಠಾನವನ್ನು ಖಚಿತಪಡಿಸುವ ಉದ್ದೇಶದಿಂದ, ಪ್ರಸ್ತುತ ಜಾರಿಯಲ್ಲಿರುವ ಟೆಂಡರ್ ಷರತ್ತುಗಳು, ನಿಬಂಧನೆಗಳು ಹಾಗೂ ಪ್ರೀಮಿಯಂ ದರಗಳ ಆಧಾರದ ಮೇಲೆ (2023 ರಿಂದ 2026ರ ಅವಧಿಯವರೆಗಿನ ಟೆಂಡರ್ ಹಾಗೂ 11 ಜಿಲ್ಲೆಗಳ 2025-26 ರ ಟೆಂಡರ್ ರಂತೆ) ಯೋಜನೆಯನ್ನು ಮುಂದುವರಿಸಲು 2026-27ನೇ ಸಾಲಿನ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಸಂಬಂಧಿತ ಜಿಲ್ಲೆಗಳಲ್ಲಿ RWBCIS ಯೋಜನೆಯನ್ನು ಚಾಲ್ತಿಯಲ್ಲಿರುವ ವ್ಯವಸ್ಥೆಯಡಿ ಅನುಷ್ಠಾನಗೊಳಿಸುವುದು ಸೂಕ್ತವೆಂದು ನಿರ್ಧರಿಸಲಾಗಿದೆ.

10. ಮುಂದುವರೆದು, ಓದಲಾದ (11) ಆದೇಶದಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ [Pradhan Mantri Fasal Bima Yojana (PMFBY)] ಹಾಗೂ ಮರು ವಿನ್ಯಾಸಗೊಳಿಸಲಾದ ಹವಾಮಾನ ಆದಾರಿತ ಬೆಳೆ ವಿಮೆ ಯೋಜನೆ [Restructured Weather Based Crop Insurance Scheme (RWBCIS)] ಗಳನ್ನು 2026-27ನೇ ಸಾಲಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ತೋಟಗಾರಿಕೆ ನಿರ್ದೇಶಕರು ಮೇಲೆ ಓದಲಾದ (3, 4 & 5) ಆದೇಶದಂತೆ ಮೂವತ್ತೊಂದು (31) ಜಿಲ್ಲೆ/ ಕ್ಲಸ್ಟರ್‌ಗಳಿಗೆ ಅತೀ ಕಡಿಮೆ ಪ್ರೀಮಿಯಂ ದರ [Lowest Weighted Average Premium (L1)] ಪ್ರೀಮಿಯಂ ಮೊತ್ತಗಳು ಹಾಗೂ ಆಯ್ಕೆಯಾದ ವಿಮಾ ಸಂಸ್ಥೆಗಳನ್ನು ಪರಿಗಣಿಸಿ, ಕೇಂದ್ರ ಸರ್ಕಾರದ ಸಲಹೆಯಂತೆ ರಾಜ್ಯ ಸರ್ಕಾರವು RWBCIS ಯೋಜನೆಯನ್ನು ಚಾಲ್ತಿಯಲ್ಲಿರುವ ವ್ಯವಸ್ಥೆಯಡಿ (2023 ರಿಂದ 2026ರ ಅವಧಿಯವರೆಗಿನ ಟೆಂಡರ್ ಹಾಗೂ 11 ಜಿಲ್ಲೆಗಳ 2025-26 ರ ಟೆಂಡರ್ ರಂತೆ) ಟೆಂಡರ್ ಅವಧಿಯನ್ನು ಒಂದು ವರ್ಷ (2026-27) ಕ್ಕೆ ವಿಸ್ತರಿಸಿ ಮುಂದುವರಿಸಿ ಅನುಷ್ಠಾನಗೊಳಿಸುವುದು ಸೂಕ್ತವೆಂದು

ನಿರ್ಧರಿಸಿ ಓದಲಾದ (10) ರ ಅನುಮೋದನೆಯಂತೆ 2026-27ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಅವಧಿ ವಿಸ್ತರಿಸಿ ವಿಮಾ ಸಂಸ್ಥೆಗಳು, ವಿಮಾ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಜಿಲ್ಲೆಗಳು, ಅಧಿಸೂಚಿತ ಬೆಳೆಗಳ ವಿವರ, ಶೇಕಡಾವಾರು ಪ್ರೀಮಿಯಂ ದರಗಳನ್ನು (ರೈತರು, ರಾಜ್ಯ ಮತ್ತು ಕೇಂದ್ರ ಪಾಲು) ಮುಂದುವರಿಸಿ ಅನುಮೋದಿಸುವಂತೆ, ಮೇಲೆ ಓದಲಾದ (12) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:HORTI/336/HGM/2026, ಬೆಂಗಳೂರು**
**ದಿನಾಂಕ: 15.06.2026**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಸಲಹೆಯ ಮೇರೆಗೆ ಮೂವತ್ತೊಂದು (31) ಜಿಲ್ಲೆ/ ಕ್ಲಸ್ಟರ್‌ಗಳಿಗೆ ಅತೀ ಕಡಿಮೆ ಪ್ರೀಮಿಯಂ ದರ [Lowest Weighted Average Premium (L1)] ಹಾಗೂ ಆಯ್ಕೆಯಾದ ವಿಮಾ ಸಂಸ್ಥೆಗಳನ್ನು ಪರಿಗಣಿಸಿ, ರಾಜ್ಯ ಸರ್ಕಾರವು RWBCIS ಯೋಜನೆಯನ್ನು ಚಾಲ್ತಿಯಲ್ಲಿರುವ ವ್ಯವಸ್ಥೆಯಡಿ ಮುಂದುವರಿಸಿ ಅನುಷ್ಠಾನಗೊಳಿಸುವುದು (2023 ರಿಂದ 2026ರ ಅವಧಿಯವರೆಗಿನ ಟೆಂಡರ್ ಹಾಗೂ 11 ಜಿಲ್ಲೆಗಳ 2025-26 ರ ಟೆಂಡರ್ ರಂತೆ) ಸೂಕ್ತವೆಂದು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ 2026-27ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಅವಧಿಯನ್ನು ಒಂದು ವರ್ಷ (2026-27) ಕ್ಕೆ ವಿಸ್ತರಿಸಿ, ವಿಮಾ ಸಂಸ್ಥೆಗಳು, ವಿಮಾ ಸಂಸ್ಥೆಗಳಿಗೆ ಹಂಚಿಕೆ ಮಾಡಲಾದ ಜಿಲ್ಲೆಗಳು, ಅಧಿಸೂಚಿತ ಬೆಳೆಗಳ ವಿವರ ಮತ್ತು ಶೇಕಡಾವಾರು ಪ್ರೀಮಿಯಂ ದರಗಳನ್ನು (ರೈತರು, ರಾಜ್ಯ ಮತ್ತು ಕೇಂದ್ರ ಪಾಲು) ಮುಂದುವರೆಸಿ ಅನುಬಂಧದಲ್ಲಿ ಇರುವಂತೆ ಅನುಮೋದಿಸಿ ಆದೇಶಿಸಿದೆ.

2026-27ನೇ ಸಾಲಿನ ಜಿಲ್ಲಾವಾರು ಅನುಷ್ಠಾನ ವಿಮಾ ಸಂಸ್ಥೆಗಳು ಈ ಮುಂದಿನಂತಿವೆ:

| ಕ್ರ. ಸಂ | ವಿಮಾ ಕಂಪನಿಯ ಹೆಸರು | ಜಿಲ್ಲೆಗಳ ಸಂಖ್ಯೆ | ಹಂಚಿಕೆ ಮಾಡಲಾದ ಜಿಲ್ಲೆಗಳು |
|---|---|---|---|
| 1 | ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 16 | ಬಾಗಲಕೋಟೆ, ಬೆಂಗಳೂರು ನಗರ, ಬೀದರ್, ಚಾಮರಾಜನಗರ, ಧಾರವಾಡ, ಗದಗ, ಹಾಸನ, ಕಲಬುರಗಿ, ಕೋಲಾರ, ಕೊಪ್ಪಳ, ಶಿವಮೊಗ್ಗ, ತುಮಕೂರು, ಉಡುಪಿ, ವಿಜಯನಗರ, ವಿಜಯಪುರ, ಯಾದಗಿರಿ |
| 2 | ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 3 | ದಾವಣಗೆರೆ, ಹಾವೇರಿ, ರಾಮನಗರ |
| 3 | ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 1 | ಚಿಕ್ಕಮಗಳೂರು |
| 4 | ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 2 | ಚಿತ್ರದುರ್ಗ, ಉತ್ತರ ಕನ್ನಡ |
| 5 | ಎಸ್‌ಬಿಐ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 3 | ಬಳ್ಳಾರಿ, ಮಂಡ್ಯ, ಮೈಸೂರು |
| 6 | ಟಾಟಾ ಎಐಜಿ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 3 | ಬೆಳಗಾವಿ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ |
| 7 | ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ | 3 | ಬೆಂಗಳೂರು ಗ್ರಾಮಾಂತರ, ಕೊಡಗು, ರಾಯಚೂರು |
| | ಒಟ್ಟು | 31 | |

ಸದರಿ 31 ಜಿಲ್ಲೆಗಳಲ್ಲಿ ರೈತರಿಂದ ಒಟ್ಟು ವಿಮಾ ಮೊತ್ತದ ಶೇಕಡಾ 5 ರಷ್ಟು ಹಾಗೂ ರಾಜ್ಯ ನಿಗದಿ ಪಡಿಸಿರುವ ಮಿತಿಯನ್ನು ಮೀರಿದ ಬೆಳೆಗಳಲ್ಲಿ 5% ರ ಜೊತೆಗೆ ಹೆಚ್ಚುವರಿ ವಿಮಾ ಕಂತಿನ ಮೊತ್ತವನ್ನು ರೈತರಿಂದ ಪಡೆದು ಬೆಳೆ ವಿಮೆಗೆ ನೋಂದಣಿ ಮಾಡಿಸಿಕೊಳ್ಳುವುದು.

ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2026-27 ರ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಿಗೆ 2023-24, 2024-25 ಮತ್ತು 2025-26ರ ಅಧಿಸೂಚನೆಯಲ್ಲಿ ವಿಧಿಸಿದಂತಹ ಸಂಬಂಧಿತ ಷರತ್ತು ಹಾಗೂ ನಿಬಂಧನೆಗಳು ಮುಂದುವರೆಯುತ್ತವೆ.

ಸದರಿ ಅನುಷ್ಠಾನ ವಿಮಾ ಸಂಸ್ಥೆಗಳಿಗೆ ಪಾವತಿಸಬೇಕಾದ ವಿಮಾ ಮೊತ್ತದ ರಾಜ್ಯದ ಪಾಲನ್ನು ಸರ್ಕಾರವು ಕೃಷಿ ಇಲಾಖೆಯ ಬೆಳೆವಿಮೆ ಯೋಜನೆ ಲೆಕ್ಕಶೀರ್ಷಿಕೆ: 2401-00-11C-0-07 ರಲ್ಲಿ ಕೃಷಿ ಇಲಾಖೆ ಮೂಲಕ ತೋಟಗಾರಿಕೆ ಇಲಾಖೆಗೆ ಒದಗಿಸುವ ಅನುದಾನದಿಂದ ಭರಿಸಲು ಅನುಮತಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
HV. 15/06/2026

**(ಶ್ರೀಲಕ್ಷ್ಮಿ ಹೆಚ್.ವಿ)**
ಪೀಠಾಧಿಕಾರಿ
(ಯೋಜನೆ, ಸ್ವೀಕೃತಿ ಮತ್ತು ರವಾನೆ ಶಾಖೆ)
ತೋಟಗಾರಿಕೆ ಇಲಾಖೆ

ರವರಿಗೆ,

1. ಪ್ರಧಾನ ಮಹಾಲೇಖಪಾಲರು (ಎ&ಇ)/(ಜಿ&ಎಸ್.ಎಸ್.ಎ)/(ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್ ಬಾಗ್, ಬೆಂಗಳೂರು.
6. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ನಿರ್ದೇಶಕರು, ಕೆ.ಎಸ್.ಎನ್.ಡಿ.ಎಂ.ಸಿ, ಯಲಹಂಕ, ಬೆಂಗಳೂರು – (ನಿರ್ದೇಶಕರು ತೋಟಗಾರಿಕೆ ಇಲಾಖೆ ಮುಖಾಂತರ).
9. ಕನ್ವೀನರ್, ರಾಜ್ಯ ಮಟ್ಟದ ಬ್ಯಾಂಕರ್ ಗಳ ಸಮಿತಿ (SLBC), ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕೆ ಎಸ್ ಸಿ ಅಪೆಕ್ಸ್ ಬ್ಯಾಂಕ್, ಚಾಮರಾಜಪೇಟೆ ಬೆಂಗಳೂರು
11. ಎಲ್ಲಾ ಜಿಲ್ಲಾಧಿಕಾರಿಗಳು,– (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
12. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ - (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
13. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
14. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು (ನಿರ್ದೇಶಕರು, ತೋಟಗಾರಿಕೆ ಇಲಾಖೆ ಮುಖಾಂತರ).
15. ಎಲ್ಲಾ ಲೀಡ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
16. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು- (ಅಪೆಕ್ಸ್ ಬ್ಯಾಂಕಿನ ಮುಖಾಂತರ).
17. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು –( ಎಸ್.ಎಲ್.ಬಿ.ಸಿ. ಮುಖಾಂತರ).
18. ಎಲ್ಲಾ ನೋಡಲ್ ಬ್ಯಾಂಕುಗಳು – (ಎಸ್.ಎಲ್.ಬಿ.ಸಿ. ಮುಖಾಂತರ).
19. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
20. ವ್ಯವಸ್ಥಾಪಕ ನಿರ್ದೇಶಕರು, HDFC, IFFCO TOKIO, TATA AIG, Reliance GIC, SBI and United India GIC ಕಂಪನಿ.
21. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
22. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
23. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
24. ರಾಜ್ಯ ಮಟ್ಟದ ಬೆಳೆ ವಿಮಾ ಸಮನ್ವಯ ಸಮಿತಿಯ ಎಲ್ಲಾ ಸದಸ್ಯರಿಗೆ.

25. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
26. ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
27. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
28. ಸರ್ಕಾರದ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
29. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ ಬೆಂಗಳೂರು.
30. ಕಂಪೈಲರ್, ಕರ್ನಾಟಕ ಗೆಜೆಟ್, ಬೆಂಗಳೂರು, ಇವರು ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳುವುದು.
31. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

ಅನುಬಂಧ-1

ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ 2026-27 ನೇ ಸಾಲಿನಲ್ಲಿ ಜಿಲ್ಲೆಗಳ ಬೆಳೆ-ಸಂಯೋಜನೆಗಳು, L1 ಪ್ರೀಮಿಯಂ ದರ ಮತ್ತು ರೈತರ, ಕೇಂದ್ರ ಮತ್ತು ರಾಜ್ಯ ಪಾಲಿನ ವಿವರ

| ಕ್ರ. ಸಂ | ಜಿಲ್ಲೆ | ಹಂಗಾಮು | ಜಿಲ್ಲೆಗಳ ನೀರಾವರಿ ವಿಧ | ಬೆಳೆಗಳು | ಬೆಳೆಗಳ ನೀರಾವರಿ ವಿಧ (*Irr/RF/NS) | L1 _ ವಿಮಾ ಸಂಸ್ಥೆ | ಬೆಳೆವಾರು ಒಟ್ಟು ವಿಮಾ ಮೊತ್ತ Sum Insured (Rs/Ha) | L1 _ ಪ್ರೀಮಿಯಂ ದರ (%) | ರೈತರ ಪಾಲಿನ ಪ್ರೀಮಿಯಂ ದರ (%) | ಕೇಂದ್ರ ಪಾಲಿನ ಪ್ರೀಮಿಯಂ ದರ (%) | ರಾಜ್ಯ ಪಾಲಿನ ಪ್ರೀಮಿಯಂ ದರ (%) |
|---|---|---|---|---|---|---|---|---|---|---|---|
| 1 | ಚಿಕ್ಕಮಗಳೂರು | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | IFFCO TOKIO | 47000 | 25.95 | 5.00 | 10.475 | 10.475 |
| 2 | ಚಿಕ್ಕಮಗಳೂರು | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | IFFCO TOKIO | 127000 | 25.95 | 5.00 | 10.475 | 10.475 |
| 3 | ಚಿಕ್ಕಮಗಳೂರು | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | IFFCO TOKIO | 71000 | 25.95 | 5.00 | 10.475 | 10.475 |
| 4 | ಬೆಳಗಾವಿ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | TATA AIG | 71000 | 6.00 | 5.00 | 0.500 | 0.500 |
| 5 | ಚಿಕ್ಕಮಗಳೂರು | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | IFFCO TOKIO | 128000 | 24.19 | 5.00 | 9.595 | 9.595 |
| 6 | ಚಿಕ್ಕಮಗಳೂರು | ಮುಂಗಾರು | ಮಳೆಯಾಶ್ರಿತ | ಮಾವು | NS | IFFCO TOKIO | 80000 | 25.95 | 5.00 | 10.475 | 10.475 |
| 7 | ಹಾವೇರಿ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | HDFC ERGO | 128000 | 33.48 | 5.00 | 12.500 | 15.980 |
| 8 | ಬಾಗಲಕೋಟೆ | ಮುಂಗಾರು | ನೀರಾವರಿ | ದಾಳಿಂಬೆ | NS | AIC | 127000 | 36.00 | 6.00 | 10.000 | 20.000 |
| 9 | ಬೆಳಗಾವಿ | ಮುಂಗಾರು | ಮಳೆಯಾಶ್ರಿತ | ಮಾವು | NS | TATA AIG | 80000 | 30.00 | 5.00 | 12.500 | 12.500 |
| 10 | ಚಿಕ್ಕಬಳ್ಳಾಪುರ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | TATA AIG | 280000 | 30.00 | 5.00 | 12.500 | 12.500 |
| 11 | ದಕ್ಷಿಣ ಕನ್ನಡ | ಮುಂಗಾರು | ನೀರಾವರಿ | ಕರಿಮೆಣಸು | NS | TATA AIG | 47000 | 30.00 | 5.00 | 10.000 | 15.000 |
| 12 | ದಾವಣಗೇರೆ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | HDFC ERGO | 128000 | 38.30 | 5.00 | 12.500 | 21.300 |
| 13 | ದಾವಣಗೇರೆ | ಮುಂಗಾರು | ಮಳೆಯಾಶ್ರಿತ | ಮಾವು | NS | HDFC ERGO | 80000 | 40.00 | 5.00 | 12.500 | 22.500 |

| | | | | | | | | | | | |
|---|---|---|---|---|---|---|---|---|---|---|---|
| 14 | ಗದಗ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 40.00 | 5.00 | 12.500 | 22.500 |
| 15 | ಕೊಪ್ಪಳ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 25.00 | 5.00 | 10.000 | 10.000 |
| 16 | ಕೊಪ್ಪಳ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 40.00 | 5.00 | 12.500 | 22.500 |
| 17 | ರಾಮನಗರ | ಮುಂಗಾರು | ಮಳೆಯಾಶ್ರಿತ | ಮಾವು | NS | HDFC ERGO | 80000 | 35.00 | 5.00 | 12.500 | 17.500 |
| 18 | ಉಡುಪಿ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | AIC | 128000 | 28.00 | 5.00 | 11.500 | 11.500 |
| 19 | ವಿಜಯನಗರ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 35.00 | 5.00 | 12.500 | 17.500 |
| 20 | ವಿಜಯನಗರ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 33.00 | 5.00 | 12.500 | 15.500 |
| 21 | ವಿಜಯಪುರ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 38.00 | 5.00 | 12.500 | 20.500 |
| 22 | ವಿಜಯಪುರ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 30.00 | 5.00 | 12.500 | 12.500 |
| 23 | ವಿಜಯಪುರ | ಮುಂಗಾರು | ಮಳೆಯಾಶ್ರಿತ | ನಿಂಬೆ | NS | AIC | 56000 | 30.00 | 5.00 | 12.500 | 12.500 |
| 24 | ಹಾವೇರಿ | ಮುಂಗಾರು | ಮಳೆಯಾಶ್ರಿತ | ಮಾವು | NS | HDFC ERGO | 80000 | 40.00 | 5.00 | 12.500 | 22.500 |
| 25 | ಹಾವೇರಿ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | HDFC ERGO | 71000 | 40.00 | 5.00 | 12.500 | 22.500 |
| 26 | ಬಳ್ಳಾರಿ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | SBI GIC | 127000 | 10.32 | 5.00 | 2.660 | 2.660 |
| 27 | ಉತ್ತರ ಕನ್ನಡ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | Reliance GIC | 128000 | 28.00 | 5.00 | 11.500 | 11.500 |
| 28 | ಉತ್ತರ ಕನ್ನಡ | ಮುಂಗಾರು | ಮಳೆಯಾಶ್ರಿತ | ಮಾವು | NS | Reliance GIC | 80000 | 52.00 | 17.00 | 12.500 | 22.500 |
| 29 | ಚಾಮರಾಜ ನಗರ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 16.00 | 5.00 | 5.500 | 5.500 |
| 30 | ಮಂಡ್ಯ | ಮುಂಗಾರು | ನೀರಾವರಿ | ಮಾವು | NS | SBI GIC | 80000 | 30.08 | 5.00 | 10.000 | 15.080 |
| 31 | ಬೆಂಗಳೂರು ಗ್ರಾಮಾಂತರ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | United India Insurance | 280000 | 29.10 | 5.00 | 12.050 | 12.050 |
| 32 | ಚಿತ್ರದುರ್ಗ | ಮುಂಗಾರು | ಮಳೆಯಾಶ್ರಿತ | ಮಾವು | NS | Reliance GIC | 80000 | 24.00 | 5.00 | 9.500 | 9.500 |

| | | | | | | | | | | | |
|---|---|---|---|---|---|---|---|---|---|---|---|
| 33 | ಚಿತ್ರದುರ್ಗ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | Reliance GIC | 127000 | 22.00 | 5.00 | 8.500 | 8.500 |
| 34 | ಮೈಸೂರು | ಮುಂಗಾರು | ಮಳೆಯಾಶ್ರಿತ | ಮಾವು | NS | SBI GIC | 80000 | 30.83 | 5.00 | 12.500 | 13.330 |
| 35 | ಕೊಡಗು | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | United India Insurance | 128000 | 27.70 | 5.00 | 11.350 | 11.350 |
| 36 | ಬೀದರ್ | ಮುಂಗಾರು | ಮಳೆಯಾಶ್ರಿತ | ಹೂಕೋಸು | NS | AIC | 62000 | 10.00 | 5.00 | 2.500 | 2.500 |
| 37 | ಬೀದರ್ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 34.00 | 5.00 | 12.500 | 16.500 |
| 38 | ಬೀದರ್ | ಮುಂಗಾರು | ಮಳೆಯಾಶ್ರಿತ | ಶುಂಠಿ | NS | AIC | 130000 | 10.00 | 5.00 | 2.500 | 2.500 |
| 39 | ಬೀದರ್ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 25.00 | 5.00 | 10.000 | 10.000 |
| 40 | ಕಲಬುರಗಿ | ಮುಂಗಾರು | ಮಳೆಯಾಶ್ರಿತ | ಪರಂಗಿ | NS | AIC | 134000 | 19.00 | 5.00 | 7.000 | 7.000 |
| 41 | ರಾಯಚೂರು | ಮುಂಗಾರು | ನೀರಾವರಿ | ಮಾವು | NS | United India Insurance | 80000 | 34.50 | 5.00 | 10.000 | 19.500 |
| 42 | ಹಾವೇರಿ | ಮುಂಗಾರು | ಮಳೆಯಾಶ್ರಿತ | ಶುಂಠಿ | NS | HDFC ERGO | 130000 | 40.00 | 5.00 | 12.500 | 22.500 |
| 43 | ರಾಯಚೂರು | ಮುಂಗಾರು | ನೀರಾವರಿ | ಹಸಿ ಮೆಣಸಿನಕಾಯಿ | NS | United India Insurance | 71000 | 35.90 | 5.90 | 10.000 | 20.000 |
| 44 | ರಾಯಚೂರು | ಮುಂಗಾರು | ನೀರಾವರಿ | ದಾಳಿಂಬೆ | NS | United India Insurance | 127000 | 34.40 | 5.00 | 10.000 | 19.400 |
| 45 | ಬಾಗಲಕೋಟೆ | ಮುಂಗಾರು | ನೀರಾವರಿ | ದ್ರಾಕ್ಷಿ | NS | AIC | 280000 | 31.70 | 5.00 | 10.000 | 16.700 |
| 46 | ಬೆಳಗಾವಿ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | TATA AIG | 280000 | 30.00 | 5.00 | 12.500 | 12.500 |
| 47 | ಬೆಳಗಾವಿ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | TATA AIG | 127000 | 11.00 | 5.00 | 3.000 | 3.000 |
| 48 | ಬೆಂಗಳೂರು ನಗರ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 38.00 | 5.00 | 12.500 | 20.500 |
| 49 | ಬೆಂಗಳೂರು ನಗರ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 40.00 | 5.00 | 12.500 | 22.500 |
| 50 | ಚಿಕ್ಕಬಳ್ಳಾಪುರ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | TATA AIG | 127000 | 25.00 | 5.00 | 10.000 | 10.000 |

| | | | | | | | | | | | |
|---|---|---|---|---|---|---|---|---|---|---|---|
| 51 | ಚಿಕ್ಕಬಳ್ಳಾಪುರ | ಮುಂಗಾರು | ಮಳೆಯಾಶ್ರಿತ | ಮಾವು | NS | TATA AIG | 80000 | 29.00 | 5.00 | 12.000 | 12.000 |
| 52 | ದಕ್ಷಿಣ ಕನ್ನಡ | ಮುಂಗಾರು | ನೀರಾವರಿ | ಅಡಿಕೆ | NS | TATA AIG | 128000 | 35.00 | 5.00 | 10.000 | 20.000 |
| 53 | ದಾವಣಗೇರೆ | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | HDFC ERGO | 47000 | 40.00 | 5.00 | 12.500 | 22.500 |
| 54 | ದಾವಣಗೇರೆ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | HDFC ERGO | 127000 | 32.00 | 5.00 | 12.500 | 14.500 |
| 55 | ದಾವಣಗೇರೆ | ಮುಂಗಾರು | ಮಳೆಯಾಶ್ರಿತ | ವೀಳ್ಯದಎಲೆ | NS | HDFC ERGO | 117000 | 30.00 | 5.00 | 12.500 | 12.500 |
| 56 | ಧಾರವಾಡ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 39.25 | 5.00 | 12.500 | 21.750 |
| 57 | ಧಾರವಾಡ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 44.50 | 9.50 | 12.500 | 22.500 |
| 58 | ಗದಗ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 39.00 | 5.00 | 12.500 | 21.500 |
| 59 | ಗದಗ | ಮುಂಗಾರು | ಮಳೆಯಾಶ್ರಿತ | ಪರಂಗಿ | NS | AIC | 134000 | 40.00 | 5.00 | 12.500 | 22.500 |
| 60 | ಗದಗ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 37.70 | 5.00 | 12.500 | 20.200 |
| 61 | ಹಾಸನ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | AIC | 128000 | 30.00 | 5.00 | 12.500 | 12.500 |
| 62 | ಹಾಸನ | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | AIC | 47000 | 23.00 | 5.00 | 9.000 | 9.000 |
| 63 | ಹಾಸನ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 30.00 | 5.00 | 12.500 | 12.500 |
| 64 | ಹಾಸನ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 30.00 | 5.00 | 12.500 | 12.500 |
| 65 | ಕೋಲಾರ | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 37.75 | 5.00 | 12.500 | 20.250 |
| 66 | ಕೊಪ್ಪಳ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 40.00 | 5.00 | 12.500 | 22.500 |
| 67 | ಕೊಪ್ಪಳ | ಮುಂಗಾರು | ಮಳೆಯಾಶ್ರಿತ | ಪರಂಗಿ | NS | AIC | 134000 | 40.00 | 5.00 | 12.500 | 22.500 |
| 68 | ಕೊಪ್ಪಳ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 36.00 | 5.00 | 12.500 | 18.500 |
| 69 | ಶಿವಮೊಗ್ಗ | ಮುಂಗಾರು | ನೀರಾವರಿ | ಅಡಿಕೆ | NS | AIC | 128000 | 25.20 | 5.00 | 10.000 | 10.200 |
| 70 | ಶಿವಮೊಗ್ಗ | ಮುಂಗಾರು | ನೀರಾವರಿ | ಕರಿಮೆಣಸು | NS | AIC | 47000 | 39.00 | 9.00 | 10.000 | 20.000 |

| | | | | | | | | | | | |
|---|---|---|---|---|---|---|---|---|---|---|---|
| 71 | ಶಿವಮೊಗ್ಗ | ಮುಂಗಾರು | ನೀರಾವರಿ | ಮಾವು | NS | AIC | 80000 | 40.00 | 10.00 | 10.000 | 20.000 |
| 72 | ಶಿವಮೊಗ್ಗ | ಮುಂಗಾರು | ನೀರಾವರಿ | ಶುಂಠಿ | NS | AIC | 130000 | 35.00 | 5.00 | 10.000 | 20.000 |
| 73 | ತುಮಕೂರು | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | AIC | 128000 | 19.00 | 5.00 | 7.000 | 7.000 |
| 74 | ತುಮಕೂರು | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 25.00 | 5.00 | 10.000 | 10.000 |
| 75 | ತುಮಕೂರು | ಮುಂಗಾರು | ಮಳೆಯಾಶ್ರಿತ | ಪರಂಗಿ | NS | AIC | 134000 | 39.00 | 5.00 | 12.500 | 21.500 |
| 76 | ತುಮಕೂರು | ಮುಂಗಾರು | ಮಳೆಯಾಶ್ರಿತ | ಮಾವು | NS | AIC | 80000 | 40.00 | 5.00 | 12.500 | 22.500 |
| 77 | ಉಡುಪಿ | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | AIC | 47000 | 25.00 | 5.00 | 10.000 | 10.000 |
| 78 | ವಿಜಯನಗರ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | AIC | 128000 | 39.70 | 5.00 | 12.500 | 22.200 |
| 79 | ಯಾದಗೀರ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 26.00 | 5.00 | 10.500 | 10.500 |
| 80 | ಯಾದಗೀರ | ಮುಂಗಾರು | ಮಳೆಯಾಶ್ರಿತ | ದಾಳಿಂಬೆ | NS | AIC | 127000 | 36.00 | 5.00 | 12.500 | 18.500 |
| 81 | ಯಾದಗೀರ | ಮುಂಗಾರು | ಮಳೆಯಾಶ್ರಿತ | ಪರಂಗಿ | NS | AIC | 134000 | 34.00 | 5.00 | 12.500 | 16.500 |
| 82 | ಯಾದಗೀರ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 38.00 | 5.00 | 12.500 | 20.500 |
| 83 | ಬಳ್ಳಾರಿ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | SBI GIC | 71000 | 32.760 | 5.00 | 12.500 | 15.260 |
| 84 | ಉತ್ತರ ಕನ್ನಡ | ಮುಂಗಾರು | ಮಳೆಯಾಶ್ರಿತ | ಶುಂಠಿ | NS | Reliance GIC | 130000 | 38.00 | 5.00 | 12.500 | 20.500 |
| 85 | ಉತ್ತರ ಕನ್ನಡ | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | Reliance GIC | 47000 | 39.00 | 5.00 | 12.500 | 21.500 |
| 86 | ಬೆಂಗಳೂರು ಗ್ರಾಮಾಂತರ | ಮುಂಗಾರು | ಮಳೆಯಾಶ್ರಿತ | ಮಾವು | NS | United India Insurance | 80000 | 30.00 | 5.00 | 12.500 | 12.500 |
| 87 | ಚಿತ್ರದುರ್ಗ | ಮುಂಗಾರು | ಮಳೆಯಾಶ್ರಿತ | ಅಡಿಕೆ | NS | Reliance GIC | 128000 | 25.00 | 5.00 | 10.000 | 10.000 |
| 88 | ಕೊಡಗು | ಮುಂಗಾರು | ಮಳೆಯಾಶ್ರಿತ | ಕರಿಮೆಣಸು | NS | United India Insurance | 47000 | 28.70 | 5.00 | 11.850 | 11.850 |
| 89 | ಕಲಬುರಗಿ | ಮುಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 23.00 | 5.00 | 9.000 | 9.000 |

| | | | | | | | | | | | |
|---|---|---|---|---|---|---|---|---|---|---|---|
| 90 | ಕಲಬುರಗಿ | ಮುಂಗಾರು | ಮಳೆಯಾಶ್ರಿತ | ದ್ರಾಕ್ಷಿ | NS | AIC | 280000 | 20.00 | 5.00 | 7.500 | 7.500 |
| 91 | ಬೀದರ್ | ಹಿಂಗಾರು | ಮಳೆಯಾಶ್ರಿತ | ಹೂಕೋಸು | NS | AIC | 62000 | 33.00 | 5.00 | 12.500 | 15.500 |
| 92 | ಬೆಳಗಾವಿ | ಹಿಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | TATA AIG | 71000 | 30.00 | 5.00 | 12.500 | 12.500 |
| 93 | ಬೀದರ್ | ಹಿಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 16.00 | 5.00 | 5.500 | 5.500 |
| 94 | ಕೊಪ್ಪಳ | ಹಿಂಗಾರು | ಮಳೆಯಾಶ್ರಿತ | ಹಸಿ ಮೆಣಸಿನಕಾಯಿ | NS | AIC | 71000 | 40.00 | 5.00 | 12.500 | 22.500 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

H.V.
15/06/2026.

**(ಶ್ರೀಲಕ್ಷ್ಮಿ ಹೆಚ್.ವಿ)**
ಪೀಠಾಧಿಕಾರಿ
(ಯೋಜನೆ, ಸ್ವೀಕೃತಿ ಮತ್ತು ರವಾನೆ ಶಾಖೆ)
ತೋಟಗಾರಿಕೆ ಇಲಾಖೆ